ಪಿಂಚಣಿಯನ್ನು ನಿಗದಿಪಡಿಸಿತ್ತು. ತನ್ನ ತಮ್ಮಂದಿರ ಆಸ್ತಿಯಲ್ಲಿ ಒಂದು ಅಂಗುಲವೂ ಬೇಡವೆಂದು ಇವನು ತೀರ್ಮಾನಿಸಿದ್ದ. ಮತ್ತು ಅವನ ಪ್ರಮುಖ ಗುರಿಯು ತನ್ನ ತಮ್ಮನ ಮಕ್ಕಳನ್ನು ಜೋಪಾನ ಮಾಡುವುದೇ ಆಗಿತ್ತು. ಆದರೆ ಇತ್ತಿತ್ತಲಾಗಿ ಅವನಿಗೊಂದು ಭಯಾನಕ ರೋಗ ಕಾಣಿಸಿಕೊಂಡಿತು. ರಾತ್ರಿ ಹತ್ತರಿಂದ ಮುಂಜಾನೆ ಮೂರರವರೆಗೆ ನಭೋಮಂಡಲದ ತಿಕ ಹರಿಯುವ ಹಾಗೆ ಪಾತಾಳ ಸುತಾಳ ಬಾಯ್ದೆರೆಯುವ ಹಾಗೆ ಒದರುತ್ತಿದ್ದ. ಹಳ್ಳಕೊಳ್ಳಗಳು, ಪಕ್ಕದಲ್ಲಿದ್ದ ಗುಡ್ಡಗಳು ಇವನು ಕೂಗುತ್ತಿದ್ದ ಕೂಗನ್ನೇ ಉಸುರಿ ಉಸುರಿ ಸುಸ್ತಾಗಿದ್ದವು. ಕೂಗುವುದಷ್ಟೇ ಅಲ್ಲ, ಕೂಗಿನೊಂದಿಗೆ ಅಳುವುದು, ನಗುವುದು, ಕುಣಿಯುವುದೂ ಸೇರಿರುತ್ತಿತ್ತು.

ಯಾರದೋ ಯುದ್ಧ
ಯಾವುನೋ ಸಿದ್ಧ
ಸಾಯಲು ಬದ್ಧ
ನೆನಪಾಗಲಿಲ್ಲ ಬುದ್ಧ

ಎಂದು ಹಾಡುತ್ತಲೇ ಮತ್ತೆ ಬಯಲಾಟದ ಮಾತಿಗೆ ಜಾರುತ್ತಿದ್ದ.

ನಿಟಿಲ ತಟಗಟಿತ ಕರ ಸಂಪುಟನಾಗಿ ಬಂದವರದಾರೆಂದು ಕೇಳುವ ನೀನು ದಾರು ಸೇವಕ ಮುಂದೆ ನೋಡು ನನ್ನ ಆರ್ಭಟ...

ಎಂದು ಕುಣಿದು ಆರ್ಭಟಿಸಿದರೆ, ಭೂಮಿಯೇ ಭೂಕಂಪನ.

ಹಿಂದೆ ಬಂದರೆ ಹಾಯದ, ಮುಂದೆ ಬಂದರೆ ಒದೆಯದ ಈ ನೀಲಪ್ಪ ದಿಡ್ಡೀಮನಿಯ ಈ ರೋಗಕ್ಕೆ ಬೇವಿನ ಗಿಡದ ಕಟ್ಟೇಮ್ಯಾಲೆ ಕುಳಿತ ಮಹನೀಯರು ಅನೇಕ ವ್ಯಾಖ್ಯಾನಗಳನ್ನು ಅನುಗ್ರಹಿಸಿದ್ದರು. ಅದರಲ್ಲಿ ಒಂದು ಅವರ ಮನೆಯಲ್ಲಿ ಸೇರಿಕೊಂಡ ಬ್ರಹ್ಮರಾಕ್ಷಸ. ಈ ಬ್ರಹ್ಮರಾಕ್ಷಸನನ್ನು ಹೊರಗೆ ಹಾಕಲು ಕಾವುಕಟ್ಟಿನಂತಹ ದಿಗ್ಬಂಧನವನ್ನು ಮಾಡಬೇಕಾಗುತ್ತದೆ. ಆದರೆ ಆ ಮನೆಯಲ್ಲಿ ಒಬ್ಬ ನರಪಿಳ್ಳೆಗೂ ಇದರ ಬಗ್ಗೆ ಆಸಕ್ತಿ ಇಲ್ಲ. ಅದು ಅಲ್ಲದೇ "ಈತನಿಗೆ ಒಬ್ಬ ನುರಿತ ವೈದ್ಯರ ಹತ್ತಿರ ಕರೆದುಕೊಂಡು ಹೋಗಬಾರದೇ" ಎಂಬ ಮಾತು ಕೇಳಿ ಬರುತ್ತಿತ್ತು.

